# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 313 |
| 2. | ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 06.03.2025 |
| 4. | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ವಿಷಯ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋದಲ್ಲಿ ಜನವರಿ 2025ನೇ ತಿಂಗಳಿನಲ್ಲಿ ಪ್ರತಿನಿತ್ಯ ಸಂಚರಿಸಿದ ಪ್ರಯಾಣಿಕರ ಸಂಖ್ಯೆ ಎಷ್ಟು; | ಬೆಂಗಳೂರು ಮೆಟ್ರೋದಲ್ಲಿ ಜನವರಿ 2025ನೇ ತಿಂಗಳಿನಲ್ಲಿ ಪ್ರತಿನಿತ್ಯ ಸರಾಸರಿ 8,03,701 ಪ್ರಯಾಣಿಕರು ಸಂಚರಿಸಿರುತ್ತಾರೆ. |
| ಆ) | ಫೆಬ್ರುವರಿ ತಿಂಗಳಲ್ಲಿ ದರ ಏರಿಕೆಯ ನಂತರ ಸಂಚರಿಸುತ್ತಿರುವ ಪ್ರಯಾಣಿಕರ ಸಂಖ್ಯೆ ಎಷ್ಟು; | ಫೆಬ್ರುವರಿ-2025 ರ (09.02.2025 ರಿಂದ 28.02.2025 ರವರೆಗೆ) ನಂತರ 7,20,135 ಪ್ರಯಾಣಿಕರು ಸಂಚರಿಸಿರುತ್ತಾರೆ. |
| ಇ) | ಯಾವ ಮಾನದಂಡದ ಆಧಾರದ ಮೇಲೆ ದರ ಏರಿಕೆ ಮಾಡಲಾಗಿದೆ; ಹಲವು ಹಂತಗಳಲ್ಲಿ ಶೇ. 70, 80, 100 ರವರೆಗೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಹಂತಗಳಲ್ಲಿ ಪ್ರಯಾಣ ದರವನ್ನು ಶೇ. 60ಕ್ಕೂ ಹೆಚ್ಚು ಏರಿಕೆ ಮಾಡಲಾಗಿತ್ತು; ಮತ್ತು ಸಾರ್ವಜನಿಕರ ಪ್ರತಿಭಟನೆಯ ನಂತರ ಎಷ್ಟು ಹಂತಗಳಲ್ಲಿ ಯಾವ ಪ್ರಮಾಣದ ಪ್ರಯಾಣ ದರ ಇಳಿಕೆ ಮಾಡಲಾಯಿತು; | ಬೆಂಗಳೂರು ಮೆಟ್ರೋ ರೈಲು ದರವನ್ನು The Metro Railways (Operation and Maintenance) Act-2002 ಸೆಕ್ಷನ್-34, ಸಬ್ ಸೆಕ್ಷನ್-1 ರನ್ವಯ Fare Fixation Committee (FFC) ಯನ್ನು ರಚಿಸಲು ಅವಕಾಶ ಕಲ್ಪಿಸಿದೆ.<br><br>ಸದರಿ The Metro Railways (Operation and Maintenance) Act-2002 ನ ಸೆಕ್ಷನ್-37 ರನ್ವಯ Fare Fixation Committee ನಿಗದಿಪಡಿಸಿರುವ ದರವನ್ನು ಮೆಟ್ರೋ ನಿಗಮವು ದರವನ್ನು ಅಳವಡಿಕೊಳ್ಳುತ್ತದೆ.<br><br>ಬೆಂಗಳೂರು ಮೆಟ್ರೋ ರೈಲು ನಿಗಮದಲ್ಲಿ ದರವನ್ನು ಜೂನ್-2017 ರಲ್ಲಿ ಕನಿಷ್ಠ ರೂ.10 ಮತ್ತು ಗರಿಷ್ಠ ರೂ.60 ರಂತೆ ನಿಗದಿಪಡಿಸಲಾಗಿತ್ತು. 2017 ರಲ್ಲಿ ದರವನ್ನು ನಿಗದಿಪಡಿಸಿದಾಗ, ಕಾರ್ಯಾಚರಣೆಯ ನೆಟ್‌ವರ್ಕ್ ನ ಉದ್ದ 42.30 ಕಿ.ಮೀ. ಆಗಿತ್ತು, ಅದು ಈಗ 2024 ರಲ್ಲಿ 76.95 ಕಿ.ಮೀ.ಗೆ ವಿಸ್ತಾರಗೊಂಡಿದೆ.<br><br>ಮೆಟ್ರೋ ನಿರ್ವಹಣಾ ವೆಚ್ಚಗಳು ಅಂದರೆ, ಸಿಬ್ಬಂದಿ ವೇತನ, ವಿದ್ಯುತ್ ಶಕ್ತಿಯ ವೆಚ್ಚ, ದುರಸ್ತಿ ಮತ್ತು ನಿರ್ವಹಣೆ ಮತ್ತು ಇತರೆ ಆಡಳಿತ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಆದರೆ ಜೂನ್-2017ರ ಬೆಲೆ ಮಟ್ಟದಲ್ಲಿ ಆದಾಯವನ್ನು ಪಡೆಯಲಾಗುತ್ತಿದೆ. ಇದು ಕಾರ್ಯಾಚರಣೆ ಮತ್ತು ನಿರ್ವಹಣೆ ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕರಿಗೆ ತೊಂದರೆ-ಮುಕ್ತ, ಗುಣಮಟ್ಟದ ಸೇವೆಯನ್ನು ಒದಗಿಸುವುದು ಅಗತ್ಯವಿದೆ. |

ಇದಲ್ಲದೆ ಬೆಂಗಳೂರು ಮೆಟ್ರೋ ರೈಲು ನಿಗಮವು ಪಡೆದಿರುವ ಬಾಹ್ಯ ಸಾಲದ ಮೇಲಿನ ಬಡ್ಡಿಯನ್ನು Japan International Cooperation Agency (JICA), Alternative für Deutschland (AFD), Asian Development Bank (ADB), European Investment Bank (EIB), Asian Infrastructure Investment Bank (AIIB) ಮತ್ತು Kreditanstalt für Wiederaufbau (KFW) ಮುಂತಾದ ಹಣಕಾಸು ಸಂಸ್ಥೆಗಳಿಗೆ, ವಿನಿಮಯ ದರದ ವ್ಯತ್ಯಾಸಗಳನ್ನು ಒಳಗೊಂಡಂತೆ ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಪಾವತಿಸಬೇಕಾಗಿರುತ್ತದೆ.

ಆದ್ದರಿಂದ, ಡೆಲ್ಲಿ ಮೆಟ್ರೋ ರೈಲು ನಿಗಮವು 4 ದರ ನಿಗಧಿ ಸಮಿತಿ (Fare Fixation Committee) ಗಳು ಅಳವಡಿಸಿಕೊಂಡ ಸೂತ್ರದ ಆಧಾರದ ಮೇಲೆ, ಬೆಂಗಳೂರು ಮೆಟ್ರೋ ರೈಲು ನಿಗಮವು, ಸಿಬ್ಬಂದಿ ವೆಚ್ಚ, ಪ್ರತಿ ಯೂನಿಟ್‌ನ ವಿದ್ಯುತ್ ಶಕ್ತಿಯ ವೆಚ್ಚ ಮತ್ತು ಪ್ರತಿ ಕಿಲೋಮೀಟರ್ ನಿರ್ವಹಣೆ ಮತ್ತು ಇತರ ವೆಚ್ಚಗಳನ್ನು Consumer Price Index (CPI) ಯಲ್ಲಿನ ಬದಲಾವಣೆಗಳ ಆಧಾರದ ಮೇಲೆ ದರ ಹೆಚ್ಚಳವನ್ನು ರೂಪಿಸಲಾಗಿದೆ.

ಬೆಂಗಳೂರು ಮೆಟ್ರೋ ರೈಲು ನಿಗಮದ ದರದ ಹೆಚ್ಚಳದ ವಿವರಗಳು ಈ ಕೆಳಕಂಡಂತಿವೆ:

| **ವಿವರಗಳು** | **ಆಧಾರ** | **ಸೂಚ್ಯಂಕ (CPI Index)** | **% ಬದಲಾವಣೆ** | **ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚದ ಸಂಯೋಜನೆ** | **% ದರ ಹೆಚ್ಚಳ** |
|---|---|---|---|---|---|
| ಸಿಬ್ಬಂದಿ ವೆಚ್ಚ | ಮಾರ್ಚ್-2017 ರಂತೆ CPI | 130.9 | 42% | 61% | 25.58% |
| | ಮಾರ್ಚ್ 2024 ರಂತೆ CPI | 185.8 | | | |
| ವಿದ್ಯುತ್ ಶಕ್ತಿ ವೆಚ್ಚ | ಮಾರ್ಚ್ 2017 ರಲ್ಲಿ ವೆಚ್ಚ/ ಯೂನಿಟ್ | 5.19 | 34% | 19% | 6.41% |
| | ಮಾರ್ಚ್ 2024 ರಲ್ಲಿ ವೆಚ್ಚ/ ಯೂನಿಟ್ | 6.94 | | | |
| ನಿರ್ವಹಣೆ ಮತ್ತು ಆಡಳಿತ ವೆಚ್ಚ | ಮಾರ್ಚ್ 2017 ರಲ್ಲಿ ರೂ / ಕೋಟಿ | 0.38 | 366% | 20% | 73.16% |
| | ಮಾರ್ಚ್ 2024 ರಲ್ಲಿ ರೂ/ಕೋಟಿ | 1.77 | | | |
| **ಒಟ್ಟು** | | | | **100%** | **105.15%** |

2017 ರಲ್ಲಿ ಅಸ್ತಿತ್ವದಲ್ಲಿರುವ ದರದ ಮೇಲಿನ ಹೆಚ್ಚಳವನ್ನು ಪ್ರತಿ ವರ್ಷದಂತೆ 14.02%ಗಳಷ್ಟು ಹೆಚ್ಚಳಗೊಂಡಲ್ಲಿ ಏಳುವರೆ (7.5) ವರ್ಷಗಳ ಅವಧಿಯಲ್ಲಿ 105.15% ರಷ್ಟು ಹೆಚ್ಚಾಗುತ್ತದೆ.

| | | |
|---|---|---|
| | | ಆದರೆ, Fare Fixation Committee (FFC) ಪ್ರಯಾಣಿಕರ ಮೇಲೆ ಪ್ರಯಾಣ ದರ ಪರಿಷ್ಕರಣೆ ಪರಿಣಾಮವನ್ನು ಕಡಿಮೆ ಮಾಡಲು ದರ ಏರಿಕೆಯನ್ನು ಸರಾಸರಿ 105.15% ರಿಂದ 51.55% ರಷ್ಟು ಶಿಫಾರಸ್ಸು ಮಾಡಿರುತ್ತಾರೆ. |
| ಈ) | ಈ ರೀತಿಯಲ್ಲಿ ಅಸಹಜ ಪ್ರಯಾಣದರ ಏರಿಕೆ ಮಾಡಿದ್ದಲ್ಲಿ ಸಾರ್ವಜನಿಕರು ಖಾಸಗಿ ವಾಹನಗಳಲ್ಲಿ ಸಂಚರಿಸಲು ಪ್ರಾರಂಭಿಸದಲ್ಲಿ ನಗರದಲ್ಲಿ ಮತ್ತಷ್ಟು ಸಂಚಾರ ದಟ್ಟಣೆ ಉಂಟಾಗುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಮೆಟ್ರೋ ಪ್ರಯಾಣದರ ಇನ್ನಷ್ಟು ಇಳಿಕೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು? | ದಿನಾಂಕ:09.02.2025 ರಂದು ಜಾರಿಯಾದ ಪರಿಷ್ಕೃತ ದರದಲ್ಲಿ ಗರಿಷ್ಠ 81.82% ರಿಂದ 100% ರಷ್ಟು ಹೆಚ್ಚಳ ಮಾಡಲಾಗಿತ್ತು. ತದನಂತರ ಈ ಬಗ್ಗೆ ಮರು ಪರಿಶೀಲಿಸಿ ದಿನಾಂಕ:14.02.2025 ರಂದು ಗರಿಷ್ಠ ದರ 81.82% ರಿಂದ 71.43% ಕ್ಕೆ ಇಳಿಕೆ ಮಾಡಲಾಗಿರುತ್ತದೆ. |

ಕಡತ ಸಂಖ್ಯೆ: ನಅಇ 46 ಪಿ.ಆರ್.ಜೆ 2025

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ